ಮನುಷ್ಯನಿಗೆ ಅಪಾಯದ ಗಂಟೆ ಬಾರಿಸಿದರೂ ಕೇಳಿಸಿಯೇ ಇರಲಿಲ್ಲ. ಮಗನಿಗೂ, ಹೆಂಡತಿಗೂ ಪತ್ತೆ ಆಗುವ ಹೊತ್ತಿಗೆ ಲಕ್ಷ ಲಕ್ಷ ಹಣ ಕೈಬಿಟ್ಟಿತ್ತು. ಪ್ರೀತಿಯ ಗಂಡ, ಅಪ್ಪ, ಅಜ್ಜ ಎಲ್ಲಾ ಆಗಿದ್ದ ಈ ವ್ಯಕ್ತಿ ಈ ವಯಸ್ಸಿನಲ್ಲಿ ಇಂತಹ ಒಂದು ಕತ್ತಲೆಯ ಕೂಪಕ್ಕೆ ಬಿದ್ದದ್ದಾದರೂ ಹೇಗೆ ಎಂದು ನಂಬುವುದೇ ಹೆಂಡತಿಗೆ ಕಷ್ಟವಾಗಿತ್ತು.

### ಆಕ್ಸೆಸಿಬಿಲಿಟಿ, ಅವೈಲಬಿಲಿಟಿ, ಅನಾನಿಮಿಟಿ

ಅರ್ಧ ಶತಮಾನದ ಹಿಂದೆ ಒಂದು ಅಶ್ಲೀಲ ವಿಡಿಯೊವನ್ನು ಮನೆಯಲ್ಲಿ ನೋಡುವ ಸಾಧನವೇ ಇರಲಿಲ್ಲ. ಇಂದು ಬೆರಳ ತುದಿಯಲ್ಲಿ ಜಗತ್ತಿನೆಲ್ಲ ಪೋರ್ನೋ ನಮ್ಮ ಮೊಬೈಲ್‌ನಲ್ಲಿ ಲಭ್ಯವಿದೆ. ಒಮ್ಮೆ ಕುತೂಹಲಕ್ಕೆ, ಇಲ್ಲ ಆಕಸ್ಮಿಕವಾಗಿ ಕ್ಲಿಕ್ ಮಾಡಿದರೂ ಸಾಕು, ಅಂತರ್ಜಾಲದ ಸರ್ಚ್ ಎಂಜಿನ್‌ಗಳು ಎಷ್ಟು ಬಲಿಷ್ಠವಾಗಿವೆ ಎಂದರೆ ಅಂತಹುದೇ ಸಾವಿರ ವಿಡಿಯೊಗಳನ್ನು ನಮ್ಮ ಪರದೆಯ ಮೇಲೆ ಮೂಡಿಸಿ ನಮ್ಮನ್ನು ಆಕರ್ಷಿಸುತ್ತವೆ. ಅಂದರೆ ಮೊದಲಿಗೆ ನೀವು ಅಂತರ್ಜಾಲದಲ್ಲಿ ಮಾಡುತ್ತಿರುವುದೇನೂ ಗುಟ್ಟಾಗಿಲ್ಲ. ನೀವು ಏನು ಮಾಡುತ್ತಿರುವಿರಿ, ಏನು ಹುಡುಕುತ್ತಿರುವಿರಿ, ಯಾವ ಸೈಟ್ ಹೆಚ್ಚು ನೋಡುತ್ತಿರುವಿರಿ ಎಂಬೆಲ್ಲ ಮಾಹಿತಿಯನ್ನು ಒಟ್ಟು ಹಾಕಿ ವಿಶ್ಲೇಷಿಸಿ ಅವುಗಳನ್ನೇ ನಿಮಗೆ ಹೆಚ್ಚು ಹೆಚ್ಚು ನೀಡಿ ಆಮಿಷ ಒಡ್ಡುತ್ತವೆ. ಇವುಗಳ ಎದುರು ಓರ್ವ 16ರ ಹರೆಯದ ಹುಡುಗನೋ, 70ರ ಮುದುಕನೋ ಕುಳಿತಿದ್ದರೆ, ಮನಸ್ಸು ಚಂಚಲವಾಗುತ್ತದೆ. ಚಪಲತೆಯನ್ನು ನಿಗ್ರಹಿಸುವಷ್ಟು ಮನಸ್ಸು ದೃಢವಿಲ್ಲದಾಗ ಕತ್ತಲೆಯ ಕಂದರದಲ್ಲಿ ಜಾರುವುದು ಅತಿ ಸುಲಭ.

ನಾವು ಸೆಕ್ಸ್ ಬಗ್ಗೆ ಮಾತೇ ಆಡದೆ ಇದ್ದಂತಹ ಸಂಸ್ಕೃತಿಯಿಂದ ಬಂದಿದ್ದೇವೆ. ಈಗ ಏಕಾಏಕಿ ಎಲ್ಲವೂ ಬೆರಳ ತುದಿಯಲ್ಲಿ ಲಭ್ಯವಿದೆ. ಅಗಾಧ ಪ್ರಮಾಣದಲ್ಲಿ ದೊರೆಯುತ್ತಿದೆ. 'ಎಲ್ಲವೂ ಗುಟ್ಟಾಗಿದೆ, ತಾವು ಮಾಡುತ್ತಿರುವುದು ಯಾರಿಗೂ ಗೊತ್ತಾಗುವುದಿಲ್ಲ' ಎಂಬ ಭ್ರಮೆ ಇದೆ. ಆದರೆ ಡಿಜಿಟಲ್ ಜಗತ್ತಿನಲ್ಲಿ ಯಾವುದೂ ರಹಸ್ಯವಲ್ಲ, ಹಾಗೆಯೇ ಯಾವುದೂ ಸಾಯುವುದಿಲ್ಲ. ಪರಸ್ತ್ರೀಗೆ ನೀವೊಂದು ಕಾಗದದ ಮೇಲೆ ಪ್ರೇಮಪತ್ರ ಬರೆದಿದ್ದಿರಿ ಅಂದುಕೊಳ್ಳಿ. ಆ ಹೆಣ್ಣು ಅದನ್ನು ಹರಿದು ಹಾಕಿದರೆ ಪುರಾವೆ ಉಳಿಯುವುದಿಲ್ಲ. ಆದರೆ ಈಗ ನೀವೊಂದು ಅಶ್ಲೀಲ ಸಂದೇಶವನ್ನು ಡಿಜಿಟಲ್ ಮಾಧ್ಯಮದ ಮೂಲಕ ಪರಸ್ತ್ರೀಗೆ ಕಳುಹಿಸುತ್ತೀರಿ ಅಂದುಕೊಳ್ಳಿ. ನಿಮ್ಮ ಮೊಬೈಲ್‌ನಿಂದ ನೀವದನ್ನು ಡಿಲೀಟ್ ಮಾಡಿದರೂ, ಆಕೆಯ ಮೊಬೈಲ್‌ನಲ್ಲಿ ಆಕೆ ಅಳಿಸಿ ಹಾಕಿದರೂ, ಆ ಸಂದೇಶ ಯಾವುದೋ ಸರ್ವರ್‌ನಲ್ಲಿ ಕುಳಿತಿರುತ್ತದೆ. ಆಕೆ ಏನಾದರೂ ಪೊಲೀಸರಿಗೆ ದೂರು ನೀಡಿದರೆ, ತನಿಖೆಗಾಗಿ ಆ ಸಂದೇಶವನ್ನು ಹೊರತೆಗೆಯುವುದೇನೂ ಕಷ್ಟವಲ್ಲ. ಅಂದರೆ ದುಡುಕಿನಲ್ಲಿ, ಆತುರದಲ್ಲಿ 'ಎಲ್ಲವೂ ಗುಟ್ಟು, ಯಾರಿಗೂ ಗೊತ್ತಾಗುವುದಿಲ್ಲ' ಎಂದು ಭ್ರಮಿಸಿ ನಾವು ಮಾಡುವ ಪ್ರತಿಯೊಂದು ಕ್ರಿಯೆಯೂ ಡಿಜಿಟಲ್ ಜಗತ್ತಿನಲ್ಲಿ ಶಾಶ್ವತವಾಗಿ ಉಳಿಯಬಲ್ಲ ಸಾಧ್ಯತೆ ಇದೆ.

ಈಗ ಈ ವಿಷಯದ ಬಗ್ಗೆ ಅರಿಯುವುದು, ಬರೆಯುವುದು ನನ್ನ ಆದ್ಯತೆಯ ವಿಷಯವಾಯಿತು. ಮನೋವಿಜ್ಞಾನಿಗಳನ್ನು, ಮೆದುಳಿನ ತಜ್ಞರನ್ನು ಭೇಟಿಯಾದೆ. ನಿಮ್ಹಾನ್ಸ್‌ನ ನಿರ್ದೇಶಕರೊಡನೆ ಸುದೀರ್ಘ ಸಂದರ್ಶನದ ಅವಕಾಶ ದೊರೆಯಿತು. ಹಿರಿಯ ಮನೋವಿಜ್ಞಾನಿಗಳೂ, ಆಪ್ತಸಲಹಾಗಾರರೂ ಆದ ಡಾ. ಸಿ.ಆರ್. ಚಂದ್ರಶೇಖರ್ ಅವರೊಡನೆಯೂ ಮಾತನಾಡಿದೆ. ಡಿಜಿಟಲ್ ವ್ಯಸನವನ್ನು ದಶಕದ ಹಿಂದೆಯೇ ಗುರುತಿಸಿದ ದಕ್ಷಿಣ ಕೊರಿಯಾ, ಜಪಾನ್ ಮತ್ತು ಅಮೆರಿಕ ದೇಶಗಳ ತಜ್ಞರು ಪ್ರಕಟಿಸಿದ ಅನೇಕ ಸಂಶೋಧನಾ ಪ್ರಬಂಧಗಳನ್ನು, ಕೇಸ್ ಹಿಸ್ಟರಿಗಳನ್ನು ಓದುತ್ತಾ ನನಗೆ ಡಿಜಿಟಲ್ ವ್ಯಸನದ ನಿಜ ರೂಪ ಅರಿವಾಗತೊಡಗಿತು. ಮನಸ್ಸು ಮತ್ತು ಮೆದುಳನ್ನು ಕುರಿತ ಮುಂಚೂಣಿಯ ಸಂಶೋಧನೆಯನ್ನು ತಿಳಿಸುವ ತಜ್ಞರು ಬರೆದ ಪುಸ್ತಕಗಳು ದೊರೆತವು. ಪರೀಕ್ಷೆಗೆ ಓದುವಂತೆ ಓದಿದೆ, ಓದಿದ್ದನ್ನು ನೋಟ್ ಮಾಡಿಕೊಂಡೆ. ಈ ನಡುವೆ ಪತ್ರಿಕೆಯಲ್ಲಿ ಸುದ್ದಿಯಾದ ಇನ್ನೊಂದು ಪ್ರಕರಣ ಮತ್ತಷ್ಟು ದಿಗ್ಭ್ರಮೆಗೊಳಿಸಿತು.



ಮನೋವಿಜ್ಞಾನಿ ಡಾ. ಸಿ.ಆರ್. ಚಂದ್ರಶೇಖರ್

2022ರ ಜೂನ್ 24ರ 'ಡೆಕ್ಕನ್ ಹೆರಾಲ್ಡ್' ಮತ್ತು 'ದಿ ಹಿಂದು' ಪತ್ರಿಕೆ ಬಿಡಿಸಿದೆ. 'ಡಿಜಿಟಲ್ ಡೇಟಿಂಗ್'ನಲ್ಲಿ ಕೋಟಿಗಟ್ಟಲೆ ಹಣ ಕಳೆದುಕೊಂಡ ಬ್ಯಾಂಕ್ ಅಧಿಕಾರಿಯ ಸುದ್ದಿ ಪ್ರಕಟವಾಗಿತ್ತು. ಹಲವು ದಿನಪತ್ರಿಕೆಗಳಲ್ಲಿ ಹೆಸರು, ಫೋಟೊ ಎಲ್ಲವೂ ಬಂದಿತ್ತು. ಆದರೆ ನಾನಿಲ್ಲಿ ಹೆಸರನ್ನು ಬದಲಿಸಿದ್ದೇನೆ. ಘಟನೆ ಹೀಗಿದೆ: ಬೆಂಗಳೂರು ನಗರದ ಒಂದು ಬಡಾವಣೆಯಲ್ಲಿರುವ ಇಂಡಿಯನ್ ಬ್ಯಾಂಕ್ ವ್ಯವಸ್ಥಾಪಕ ಶೇಖರ್ 5.7 ಕೋಟಿ ರೂಪಾಯಿ ದುರುಪಯೋಗದ ಆರೋಪದ ಮೇಲೆ ಬಂಧಿತರಾಗಿದ್ದರು. ಅವರ ಹೆಂಡತಿ ಮೊದಲ ಮಗುವಿನ ಹೆರಿಗೆಗೆ ತವರಿಗೆ ಹೋಗಿದ್ದಾಳೆ. ಈತ ಡೇಟಿಂಗ್ ಆ್ಯಪ್‌ನಲ್ಲಿ ಯುವತಿಯೊಬ್ಬಳನ್ನು ಪರಿಚಯ ಮಾಡಿಕೊಂಡಿದ್ದಾನೆ. ಮೊದಲಿಗೆ ತನ್ನದೇ 12 ಲಕ್ಷ ರೂಪಾಯಿ ಆಕೆಗೆ ಕೊಟ್ಟು ಕಳೆದಿದ್ದಾನೆ. ನಂತರ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಆ ಯುವತಿಗೆ ಬ್ಯಾಂಕಿನ 5.7 ಕೋಟಿ ರೂಪಾಯಿ ವರ್ಗಾವಣೆ ಮಾಡಿದ್ದಾನೆ. ವಿಚಾರಣೆ ನಡೆದಾಗ 'ನಂಬಿಸಿ ಕೊನೆಗೆ ಮೋಸ ಮಾಡಿದಳು' ಎಂದು ಆ ಯುವತಿಯನ್ನು ಬೈಯುತ್ತಾ ಹಲುಬಿದ್ದಾನೆಯೇ ಹೊರತು, ತನ್ನನ್ನು ನಂಬಿ ಮದುವೆಯಾಗಿ ತನ್ನ ಮಗುವಿನ ತಾಯಾಗಲು ತವರಿಗೆ ಹೋದ ಹೆಂಡತಿಗೆ ತಾನೆಂತಹ ದ್ರೋಹ ಮಾಡಿದ್ದೇನೆ ಎಂಬ ಪರಿಜ್ಞಾನವೇ ಆತನಿಗೆ ಇದ್ದಂತಿರಲಿಲ್ಲ. ಡಿಜಿಟಲ್ ಡೇಟಿಂಗ್ ಪ್ರಕರಣಗಳಲ್ಲಿ ಲಕ್ಷಗಟ್ಟಲೆ ವೈಯಕ್ತಿಕ ಹಣ ಕಳೆದುಕೊಂಡವರ ಸಂಖ್ಯೆ ಅತಿ ದೊಡ್ಡದಿದೆ.

